# B.Com. (I Semester) Examination, December 2006
## (Semester Scheme)
### ಕನ್ನಡ
### ಭಾಗ – ೧ : ಭಾಷೆ – ೧ : ಕನ್ನಡ ಪತ್ರಿಕೆ – ೧

Time: 3 Hours | Max. Marks: 90

I. ಅ) ಈ ಪದ್ಯಗಳಲ್ಲಿ ಒಂದಕ್ಕೆ ಭಾವಾರ್ಥ ಬರೆಯಿರಿ: **(1×5= 5)**

1) ಕಟ್ಟಿದ ಪಟ್ಟಮೆ ಸರವಿಗೆ
ನೆಟ್ಟನೆ ದೊರೆ ಪಿಡಿದ ಬಿಲ್ಲೆ ದಂಟಿಂಗೆಣೆ ಕ
ಣ್ಗೆಟ್ಟ ಮುದುಪಂಗೆ ಪಗೆವರ
ನಿಟ್ಟೆಲ್ವಂ ಮುರಿವೊಡೆನಗೆ ಪಟ್ಟಂ ಗಟ್ಟಾ

2) ಸಿಡಿಲು ಹೊಡೆವಡೆ ಹಿಡಿದ ಕೊಡೆ ಕಾವುದೇ ಮುನಿದು
ಪೊಡವಿನುಂಗುವೊಡೆ ಮನೆ ತಾಂಗುವುದೇ ಕವಿದು ಹೆ
ಗ್ಗಡಲುಕ್ಕಿ ಜಗವ ಮೊಗೆವಡೆ ಮೆಳೆಗಳಡ್ಡಬಹವೇ
ಹೇಳು ಮುನಿಪ ನಿನ್ನ
ಬಡ ಬೋಧೆ ಗೀಧೆಗಳು ರಕ್ಷಿಸುವವಲ್ಲ ನಾಂ
ಕಡು ಮುಳಿದ ಬಳಿಕ ಲೇಗುವುವು ನೀ ಹೇಳದಿ
ರ್ದಡೆ ಮದನ ಹರನಾಣೆ ಹೋಗೆಂದು
ಕೌಶಿಕಂ ಜಱಿದನು ವಸಿಷ್ಠ ಮುನಿಯ

ಆ) ಎರಡನ್ನು ಸಂದರ್ಭ ಸಹಿತ ವಿವರಿಸಿ: **(2×3= 6)**

1) ನಿಮ್ಮ ಕುಲವಾಕುಲಮಂ ನಿಮಗುಂಟು ಮಾಡುಗುಂ
2) ಶಸ್ತ್ರವ್ರಣಮಂ ನಿನ್ನಂತೆ ಮೆಱೆವುದಿಱವ ಬೆಡಂಗಂ
3) ಮಗ ಮುನಿದಡೆ ತಂದೆ ಮುನಿಯನು
4) ಊರ ಹಂದಿಗೆ ಷಡ್ರಸಾನ್ನವನಿಕ್ಕಲು
ನಾರುವ ದುರ್ಗಂಧ ಬಿಡಬಲ್ಲುದೆ

ಇ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ: **(2×2= 4)**

1) ಪ್ರಹ್ಲಾದ
2) ಚಂಪು
3) ಗಂಡ
4) ಕುಮಾರ ವ್ಯಾಸ

ಈ) ಈ ವಾಕ್ಯಗಳನ್ನು **ಹೊಸಗನ್ನಡಕ್ಕೆ** ಪರಿವರ್ತಿಸಿ: 5

ಇನ್ನೆಲ್ಲಿಯ ಧೃತರಾಷ್ಟ್ರಂ ಎತ್ತಣ ಗಾಂಗೇಯಂ ಎಲ್ಲಿಯ ಸಂಧಿಕಾರ್ಯಂ ದುಶ್ಶಾಸನಾದಿಗಳಪ್ಪ ನೂರ್ವರ್ ಕೌರವರುಮನಗುರ್ವಾಗೆ ಕೊಂದಿಕ್ಕಿದಂ ಇನ್ನೊರ್ಬನುಟಿದಂ ದುರ್ಯೋಧನನಂ ಕೊಲ್ವುದುಂ ಗೆಲ್ವುದುಂ ನಮ್ಮರಸಂಗಾವುದು ಗಹನಂ ಅದರ್ಕೆ ಚಿಂತಿಸದಿರಿಂ.

II. **ನಾಲ್ಕಕ್ಕೆ** ಸಂಕ್ಷಿಪ್ತ ಉತ್ತರ ಬರೆಯಿರಿ: **(4×5=20)**

1) ಭೀಷ್ಮರ ನಿಂದನೆಗೆ ದ್ರೋಣ ಪ್ರತಿಭಟಿಸಿದ ರೀತಿ.

2) ದ್ರೌಪದಿಯ ಸಂಕಟಕ್ಕೆ ಭೀಮ ಪ್ರತಿಕ್ರಿಯಿಸಿದ ಬಗೆ.

3) ವಸಿಷ್ಠ ವಿಶ್ವಾಮಿತ್ರರ ವಿವಾದ ಇಂದ್ರಸಭೆಯಲ್ಲಿ ಮೂಡಿಸಿದ ಆತಂಕ.

4) ಧರ್ಮರಾಯನಿಗೆ ಒದಗಿದ ಸಂಕಟದ ಪರಿಸ್ಥಿತಿ.

5) ಕನಕದಾಸರು ವಿಷ್ಣುವಿನ ಹಿರಿಮೆಯನ್ನು ಸ್ತುತಿಸಿರುವ ಬಗೆ.

6) ಹರಿಯ ದರುಶನಕ್ಕಾಗಿ ಬಂದ ನಾರದರು ಕಂಡ ಅಪೂರ್ವ ದೃಶ್ಯ.

7) ಸೊಸೆಯ ಆಸೆಬುರುಕತನದ ಪರಿಣಾಮ.

III. **ಎರಡು** ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರವನ್ನು ಬರೆಯಿರಿ. **(2×10= 20)**

1) 'ಸೂಟ್ಟಡೆಯಲಪ್ಪುದು ಕಾಣ' ಕಾವ್ಯಭಾಗದಲ್ಲಿ ಚಿತ್ರಿತವಾಗಿರುವ ಕರ್ಣ ಭೀಷ್ಮರ ವ್ಯಕ್ತಿತ್ವಗಳನ್ನು ವಿವೇಚಿಸಿ.

2) ದ್ರೌಪದಿಯ ಕೃಷ್ಣಭಕ್ತಿಯ ಅನನ್ಯತೆ ಚಿತ್ರಿತವಾಗಿರುವ ಬಗೆ ಹೇಗೆ ?

3) ಭಕ್ತ ಭಗವಂತರ ಸಂಬಂಧ ಸಿದ್ಧರಾಮನ ವಚನಗಳಲ್ಲಿ ವ್ಯಕ್ತವಾಗಿರುವ ರೀತಿಯನ್ನು ಸ್ಪಷ್ಟಪಡಿಸಿ.

4) ವಸಿಷ್ಠ ವಿಶ್ವಾಮಿತ್ರರ ನಡುವಣ ಸಂಭಾಷಣೆಯ ಸ್ವಾರಸ್ಯವನ್ನು ವಿಶದಪಡಿಸಿ.

5) 'ಸತ್ಯವಂತೆ ಹಡೆದವ್ವ' – ಜನಪದ ಗೀತೆಯಲ್ಲಿ ಕಂಡುಬರುವ ಹಾಸ್ಯಮಯ ಪ್ರಸಂಗಗಳನ್ನು ನಿರೂಪಿಸಿ.

IV. **ಐದು** ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ: **(1×5= 5)**

1) ತಂದೆಯವರು ಓದುತ್ತಿದ್ದ ಪುಸ್ತಕ ಯಾವುದು ?

2) ''ನಾನು ನಿನ್ನ ಕೆಳದಿ'' ಎಂದವರು ಯಾರು ?

3) ರಥಸಪ್ತಮಿ ಹಬ್ಬ ಯಾವ ಮಾಸದಲ್ಲಿ ಬರುತ್ತದೆ ?

4) ಸಾಲ್ ಚಕ್ರವರ್ತಿ ಯಾರು ?

5) ನಾರಾಯಣ ಮೂರ್ತಿಯ ಬಗ್ಗೆ ಊರಿನವರ ನಂಬಿಕೆ ಏನು ?

6) ವಿಪ್ರರ ಯಾವ ಕಾರ್ಯ ವಿಜ್ಞಾನಿಗಳಿಗೆ ಅಜ್ಞಾನವೆಂದು ತೋರುತ್ತದೆ ?

7) ಬೀದಿ ಬಸವನನ್ನು ಯಾರ ವಂಶದವನೆಂದು ನಿರೂಪಕ ಹೊಗಳುತ್ತಾನೆ ?

V. ಒಂದು ವಿಷಯದ ಬಗ್ಗೆ **ವಿವರಣಾತ್ಮಕ** ಟಿಪ್ಪಣಿ ಬರೆಯಿರಿ: **(1×5= 5)**

1) ಕೊಳದ ತಡಿಯಲ್ಲಿ ನಡೆದ ದೇವಕಿಶೋರಿಯ ಭೇಟಿ.

2) ಚೆಲುವರಾಯ ವೈಲುಮಾಳಿಗೆಗೆ ರಹಸ್ಯವಾಗಿ ಹೊರಡುವ ಸಂದರ್ಭ.

VI. **ಎರಡು** ಪ್ರಶ್ನೆಗಳಿಗ ಉತ್ತರಿಸಿ: **(2×10=20)**

1) ಬ್ರಾಹ್ಮಣರು ಬೆಟ್ಟಕ್ಕೆ ನೀರು ಹೊತ್ತ ಸಂದರ್ಭ ಹಾಗೂ ಅದರ ಹಿನ್ನೆಲೆಯನ್ನು ವಿವರಿಸಿ.

2) ಚೆಲುವರಾಯ ಸ್ವಾಮಿಯ ಉತ್ಸವವನ್ನು ಮಗು ಗ್ರಹಿಸಿದ ಬಗೆ ಹೇಗೆ ? ವಿಶದಪಡಿಸಿ.

3) 'ನೌಕಾಚಂದ್ರ' ಪ್ರಬಂಧದ ಸ್ವಾರಸ್ಯವನ್ನು ತಿಳಿಸಿ.

4) ಗೋಕುಲಾಷ್ಟಮಿ ತರುವ ನಚ್ಚು ಯಾವುದು ? ಹೇಗೆ ? ವಿವೇಚಿಸಿ.

---